**ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ**
**ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ,**
**ಬೆಂಗಳೂರು-560 001**

ಸಂ. ಕೆಎಸ್‌ಸಿಡಿಸಿ/ವ್ಯ(ಉ)/ಟಿಎನ್-13/2017-18 ದಿನಾಂಕ:22.05.2017

**ನಿಗಮದ ಉತ್ಪಾದನಾ ಘಟಕಗಳನ್ನು ಬಾಡಿಗೆ ಆಧಾರದ ಮೇಲೆ ನೀಡಲು ಟೆಂಡರ್ ಅಧಿಸೂಚನೆ**

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು ಇದರ ನಿರ್ದೇಶಕ ಮಂಡಳಿಯು ತನ್ನ ದಿನಾಂಕ:25.03.2017ರಂದು ನಡೆದ 135ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ, ನಿಗಮದ ಕೆಲ ಉತ್ಪಾದನಾ ಘಟಕಗಳನ್ನು ಬಾಡಿಗೆ ಆಧಾರದ ಮೇಲೆ ನಡೆಸಿದಲ್ಲಿ ಲಾಭದಾಯಕವಾಗುವುದೆಂದು ಮನಗಂಡು, ಬಾಡಿಗೆ ಆಧಾರದ ಮೇಲೆ ಸರ್ಕಾರದ ಅನುಮೋದನೆಯೊಂದಿಗೆ ನಡೆಸಲು ತೀರ್ಮಾನಿಸಿದೆ. ಅದರಂತೆ, ಈ ಕೆಳಗಿನ ಘಟಕಗಳಿಗೆ ಬಾಡಿಗೆ ಪಡೆಯಲು ಇಚ್ಚಿಸುವ ಉದ್ದಿಮೆದಾರರನ್ನು ಗುರುತಿಸಲು ಪಾರದರ್ಶಕ ಕಾಯ್ದೆಯನ್ವಯ ಟೆಂಡರ್ ಮುಖಾಂತರ ಆಹ್ವಾನಿಸಲು ಕ್ರಮ ಕೈಗೊಂಡಿದೆ.

ಬಾಡಿಗೆ ಆಧಾರದ ಮೇಲೆ ನೀಡಲು ತೀರ್ಮಾನಿಸಿದ ಉತ್ಪಾದನಾ ಘಟಕಗಳ ವಿವರಗಳು:

1. ತೆಂಗಿನ ನಾರಿನ ಉತ್ಪಾದನಾ ಘಟಕ
2. ಸಿ.ಎಫ್.ಸಿ. ಘಟಕ
3. ಮೌಲ್ಡಡ್ ಟ್ರೇ ತಯಾರಿಕಾ ಘಟಕ
4. 2ಪ್ಲೈ/3ಪ್ಲೈ ಹುರಿ ತಯಾರಿಕಾ ಘಟಕ
5. ಮ್ಯಾಟ್ ತಯಾರಿಕಾ ಘಟಕ

ಷರತ್ತು ಮತ್ತು ನಿಬಂಧನೆಗಳು :

1. ನಿಗಮದ ಉತ್ಪಾದನಾ ಘಟಕಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಆಸಕ್ತಿವುಳ್ಳವರು ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳು **"ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560 001"** ಇವರಿಗೆ ಸಲ್ಲಿಸಬೇಕು.
2. ಟೆಂಡರ್ ಅವಧಿ ಈ ಕೆಳಕಂಡಂತಿದೆ:

| | | | |
|---|---|---|---|
| ಅ. | ಟೆಂಡರ್ ದಾಖಲಾತಿಗಳನ್ನು ಪಡೆಯುವ ಅವಧಿ | : | ದಿನಾಂಕ:26.05.2017ರಿಂದ 24.06.2017 ರವರೆಗೆ ಮಧ್ಯಾಹ್ನ 1.00 ಗಂಟೆಯೊಳಗೆ |
| ಆ. | ಟೆಂಡರ್ ದಾಖಲಾತಿ ಸಲ್ಲಿಸಬೇಕಾದ ಕಡೆಯ ದಿನಾಂಕ | : | ದಿನಾಂಕ:24.06.2017 ಸಂಜೆ 3.00 ಗಂಟೆ ಯೊಳಗೆ |
| ಇ. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | : | ದಿನಾಂಕ:26.06.2017 ಬೆಳಿಗ್ಗೆ 11.00 ಗಂಟೆ |
| ಈ. | ಆರ್ಥಿಕ ಬಿಡ್ ತೆರಯುವ ದಿನಾಂಕ | : | ದಿನಾಂಕ:26.06.2017 ಸಂಜೆ 4.00 ಗಂಟೆ |
| ಉ. | ಟೆಂಡರ್ ದಾಖಲಾತಿಯ ಅರ್ಜಿ ಶುಲ್ಕ | : | ರೂ. 500/- |

3. ಉತ್ಪಾದನಾ ಘಟಕಗಳ ಬಾಡಿಗೆ ಅವಧಿಯು ಸರ್ಕಾರ ನಿಗಧಿಪಡಿಸಿರುವ ಕನಿಷ್ಠ 5 ವರ್ಷಗಳ ಅವಧಿಯಾಗಿರುತ್ತದೆ. ಪ್ರತಿ ವರ್ಷ ಶೇಕಡ 5%ರಷ್ಟು ಬಾಡಿಗೆ ಹೆಚ್ಚಳ ಮಾಡಲಾಗುವುದು.

4. ಟೆಂಡರ್‌ದಾರರು ಪಡೆಯಲು ಇಚ್ಛಿಸುವ ಉತ್ಪಾದನಾ ಘಟಕಗಳಿಗೆ ಅಧಿಕ ಬಾಡಿಗೆ ಮೊತ್ತ ನಮೂದಿಸುವವರನ್ನು ಟೆಂಡರ್‌ನ ನಿಯಮದಂತೆ ಆಯ್ಕೆ ಮಾಡಲಾಗುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಟೆಂಡರ್‌ದಾರರು ಒಂದು ಘಟಕಕ್ಕೆ ಒಂದೇ ರೀತಿಯ ಬಾಡಿಗೆ ದರವನ್ನು ನಮೂದಿಸಿದಲ್ಲಿ, ಅಂತಹ ಟೆಂಡರ್‌ದಾರರುಗಳ ದರವನ್ನು ಬಹಿರಂಗ ಹರಾಜಿನ ಮೂಲಕ ಅಂತಿಮ ಗೊಳಿಸಲಾಗುವುದು.

5. ಉತ್ಪಾದನಾ ಘಟಕಗಳನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ವಹಿಸಲಾಗುವುದು. ಇದೇ ರೀತಿ ಟೆಂಡರ್‌ದಾರರಗಳು ಸಹ ಬಾಡಿಗೆ ಅವಧಿ ಪೂರ್ಣಗೊಂಡ ನಂತರ ನಿಗಮದ ವಶಕ್ಕೆ ಹಿಂದಿರುಗಿಸಬೇಕು.

   ಟೆಂಡರ್‌ದಾರರು ತಮಗೆ ವಹಿಸಿಕೊಟ್ಟಿರುವ ಘಟಕವನ್ನು ಯಾವುದೇ ಕಾರಣಕ್ಕೆ ಉಪ ಬಾಡಿಗೆ ಆಧಾರ ಮೇಲೆ ನೀಡಬಾರದು. ಒಂದು ವೇಳೆ ನೀಡಿರುವುದು ಕಂಡು ಬಂದಲ್ಲಿ, ಅಂತಹವರ ಕರಾರನ್ನು ರದ್ದುಗೊಳಿಸಿ, ಇ.ಎಂ.ಡಿ./ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6. ಉತ್ಪಾದನಾ ಘಟಕವನ್ನು ಉಪಯೋಗಿಸುವ/ಹಿಂದಿರುಗಿಸುವ ಸಂದರ್ಭದಲ್ಲಿ ಕಟ್ಟಡ, ಯಂತ್ರೋಪಕರಣ, ಇತ್ಯಾದಿಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ, ಅದಕ್ಕೆ ಟೆಂಡರ್‌ದಾರರೇ ಪೂರ್ಣ ಜವಾಬ್ದಾರರು ಹಾಗೂ ಸಣ್ಣ ಪುಟ್ಟ ದುರಸ್ಥಿಗಳನ್ನು ಸೌಲಭ್ಯದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸತಕ್ಕದ್ದು. ದೊಡ್ಡ ಗಾತ್ರದ ದುರಸ್ಥಿಗಳು ಕಂಡು ಬಂದಲ್ಲಿ, ಅದನ್ನು ನಿಗಮದ ಅನುಮತಿ ಮತ್ತು ಉಸ್ತುವಾರಿಯಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸಿಕೊಳ್ಳಬೇಕು.

7. ಉತ್ಪಾದನಾ ಘಟಕಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಟೆಂಡರ್‌ದಾರರು ಘಟಕದಲ್ಲಿನ ಕೆಲಸ ನಿರ್ವಹಿಸುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಬಹುದಾಗಿದೆ. ನಿಮ್ಮ ಬಾಡಿಗೆ ಅವಧಿಯಲ್ಲಿ ಕೆಲಸ ನಿರ್ವಹಿಸುವವರಿಗೂ ನಿಗಮಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಹಾಗೂ ಯಾವುದೇ ಕಾರಣಕ್ಕೂ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಬಾರದು, ಇದು ಕಾನೂನು ಬಾಹಿರ ಮತ್ತು ನಿಗಮದ ಘನತೆಗೆ ಧಕ್ಕೆ ತರುವಂತಹ ವಿಷಯವಾಗಿರುತ್ತದೆ.

8. ನ್ಯಾಯಾಲಯದಲ್ಲಿ ನಿಗಮದ ವಿರುದ್ಧ ಪ್ರಕರಣ ದಾಖಲು ಮಾಡಿರುವವರು ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ. ಒಂದು ವೇಳೆ ಅಂತಹ ಅಭ್ಯರ್ಥಿಗಳು ಭಾಗವಹಿಸಿದ್ದಲ್ಲಿ ಅವರ ಬೇಡಿಕೆಯನ್ನು ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

9. ಟೆಂಡರ್‌ನಲ್ಲಿ ಯಾಶಸ್ವಿಯಾದ ಬಿಡ್‌ದಾರರು ಉತ್ಪಾದನಾ ಘಟಕವನ್ನು ಶೂಚಿಯಾಗಿ ಇಟ್ಟುಕೊಳ್ಳಬೇಕು. ಹಾಗೂ ಘಟಕವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿದೆ, ಅದಕ್ಕೆ ಮಾತ್ರ ಉಪಯೋಗಿಸಬೇಕು. ಬೇರೆ ಯಾವುದೇ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬಂದಲ್ಲಿ, ತಕ್ಷಣವೇ ಯಾವುದೇ ಮಾಹಿತಿಯನ್ನು ನೀಡದೇ ಕರಾರನ್ನು ರದ್ದುಗೊಳಿಸುವ ಹಕ್ಕು ನಿಗಮಕ್ಕೆ ಇರುತ್ತದೆ.

10. ಕರಾರು ಅವಧಿಯಲ್ಲಿ ಉತ್ಪಾದನಾ ಘಟಕದ ವಿದ್ಯುತ್‌ಚ್ಛಕ್ತಿ ವೆಚ್ಚ, ನೀರಿನ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಟೆಂಡರ್‌ದಾರರೇ ಸಂಬಂಧಪಟ್ಟ ಇಲಾಖೆಗೆ ಭರಿಸಿ, ಬಿಲ್ಲು ಹಾಗೂ ರಸೀದಿಗಳನ್ನು ನಿಗಮಕ್ಕೆ ಸಲ್ಲಿಸಬೇಕು.

11. ಟೆಂಡರ್‌ದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ನಿಗಮವು ಕಾಲಕಾಲಕ್ಕೆ ವಿಧಿಸುವ ಎಲ್ಲಾ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದ್ದಾಗಿರುತ್ತದೆ.

12. ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ ಮತ್ತು ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

13. ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಪರಸ್ಪರ ಚರ್ಚೆಯ ಮುಖಾಂತರ ಬಗೆಹರಿಸಿಕೊಳ್ಳತಕ್ಕದ್ದು. ಈ ಬಗ್ಗೆ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನ ಅಂತಿಮವಾಗಿರುತ್ತದೆ. ಒಂದು ವೇಳೆ ಕರಾರಿನಿಂದ ಇನ್ನೇನಾದರೂ ವ್ಯಾಜ್ಯ ಉದ್ಭವಿಸಿದಲ್ಲಿ ಬೆಂಗಳೂರಿನ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಕಾನೂನಿನ ರೀತ್ಯ ಕ್ರಮ ವಹಿಸಬಹುದಾಗಿದೆ.

14. ಟೆಂಡರ್ ಗಿಟ್ಟಿಸುವಲ್ಲಿ ಮತ್ತು ನಿರ್ವಹಣೆ ಸಂದರ್ಭದಲ್ಲಿ ರಾಜಕೀಯ ಪ್ರಭಾವ ಬಳಕೆಯನ್ನು ಕಟ್ಟುನಿಟ್ಟಾಗಿ ಖಂಡಿಸಿದೆ. ಮತ್ತು ಇಂತಹ ಅಂಶ ಕಂಡುಬಂದಲ್ಲಿ ಒಪ್ಪಂದವನ್ನು ಮೊಟಕುಗೊಳಿಸಲಾಗುವುದು.

15. ಯಶಸ್ವಿ ಟೆಂಡರ್‌ದಾರರಿಗೆ ಒಪ್ಪಂದ ಮತ್ತು ಸಂಬಂಧಪಟ್ಟ ಆದೇಶ ನೀಡುವ ಮುನ್ನ ಸರ್ಕಾರದ ಅನುಮೋದನೆಗೆ ಕಾಯ್ದಿರಿಸಲಾಗಿರುತ್ತದೆ.

**ಟೆಂಡರ್‌ದಾರರು ಪಾಲಿಸಬೇಕಾದ ವಿಷಯಗಳು:**

1. ಟೆಂಡರ್‌ದಾರರು ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ **ರೂ.50,000/-** (ರೂಪಾಯಿ ಐವತ್ತು ಸಾವಿರಗಳು ಮಾತ್ರ)ನ್ನು **"ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು"** ಹೆಸರಿಗೆ **ಡಿ.ಡಿ.ಯನ್ನು** ಪಡೆದು ಸಲ್ಲಿಸುವುದು.

   ಟೆಂಡರ್‌ನಲ್ಲಿ ಯಶಸ್ವಿಯಾಗುವ ಬಿಡ್‌ದಾರರು ಭದ್ರತಾ ಠೇವಣಿಯಾಗಿ ಈ ಕೆಳಕಂಡಂತೆ ಕೇಂದ್ರವಾರು ನಿಗಧಿಪಡಿಸಿರುವ ಮೊತ್ತವನ್ನು **NEFT (National Electronic Fund Transfer)** ಮುಖೇನ ಪಾವತಿಸುವುದು.

| ಕ್ರ.ಸಂ. | ಘಟಕ | ಭದ್ರತಾ ಠೇವಣಿ ಮೊತ್ತ |
|---|---|---|
| 1 | ತೆಂಗಿನ ನಾರಿನ ಉತ್ಪಾದನಾ ಘಟಕ | ರೂ. 1.00 ಲಕ್ಷ |
| 2 | ಸಿ.ಎಫ್.ಸಿ. ಘಟಕ | ರೂ. 10.00 ಲಕ್ಷ |
| 3 | ಮೌಲ್ಡಡ್ ಟ್ರೇ ತಯಾರಿಕಾ ಘಟಕ | ರೂ. 3.00 ಲಕ್ಷ |
| 4 | 2ಪ್ಲೈ/3ಪ್ಲೈ ಹುರಿ ತಯಾರಿಕಾ ಘಟಕ | ರೂ. 1.00 ಲಕ್ಷ |
| 5 | ಮ್ಯಾಟ್ ತಯಾರಿಕಾ ಘಟಕ | ರೂ. 25,000/- |

2. ಟೆಂಡರ್‌ದಾರರು ಬಿಡ್‌ಗಳನ್ನು ಸಲ್ಲಿಸುವ ದಿನಾಂಕವನ್ನು ಮೇಲಿನಂತೆ ಪಾಲಿಸುವುದು.
3. ಟೆಂಡರ್‌ದಾರರು ದರಗಳನ್ನು ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು **(ಪರಿಶಿಷ್ಟ -1 ರಂತೆ).**
4. ಟೆಂಡರ್‌ದಾರರು ಯಾವುದೇ ಕಾರಣಕ್ಕೆ ದರಗಳನ್ನು ತಿದ್ದಿ ಬರೆಯಬಾರದು. ಅಂತಹ ಬಿಡ್‌ಗಳು ಕಂಡು ಬಂದಲ್ಲಿ ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.
5. ಟೆಂಡರ್‌ದಾರರು ಸಲ್ಲಿಸಬೇಕಾದ ದಾಖಲಾತಿಗಳು:
   1. ಗುರುತಿನ ಚೀಟಿ (ಆಧಾರ್ ಕಾರ್ಡ್/ಚಾಲನಾ ಪರವಾನಗಿ/ಮತದಾರ ಗುರುತಿನ ಚೀಟಿ/ಪಾಸ್‌ಪೋರ್ಟ್)
   2. ವಿಳಾಸದ ಬಗ್ಗೆ ದೃಢೀಕೃತ ದಾಖಲೆ
   3. ಪ್ಯಾನ್ ಕಾರ್ಡ್
   4. ಮುಚ್ಚಳಿಕೆ ಪತ್ರ ಈ ಕೆಳಕಡಂತೆ - 1. I hereby declare that (a) I have not been debarred from any Govt. /Public organization (b) I abide the rules of KSCDC and Statutory conditions (c) I have not been blacklisted for participating in tender from Govt./Private Organization ಎಂದು ಬರೆದು ಕೊಡಬೇಕು.
   5. ಸರ್ಕಾರಿ ಇಲಾಖೆಯಿಂದ ಪಡೆದ ಸಣ್ಣ ಪ್ರಮಾಣದ ಕೈಗಾರಿಕೆ ಪ್ರಮಾಣ ಪತ್ರ (ಉದ್ಯಮಿ ಆಗಿದ್ದಲ್ಲಿ)
   6. ತೆಂಗಿನ ನಾರಿನ ಕ್ಷೇತ್ರದಲ್ಲಿ ಅನುಭವವಿರುವ ಬಗ್ಗೆ ಪ್ರಮಾಣ ಪತ್ರ (ಅನ್ವಯವಾದಲ್ಲಿ ಮಾತ್ರ)
   7. ಬ್ಯಾಂಕ್ ವಿವರಗಳು
   8. ವ್ಯಾಟ್ ನೊಂದಾಣಿ ಪತ್ರ, ಇದ್ದಲ್ಲಿ.
   9. ಟೆಂಡರ್‌ನಲ್ಲಿ ಇ.ಎಂ.ಡಿ. ಮೊತ್ತ ಪಾವತಿಸಿರುವ ದಾಖಲೆ

6. ಟೆಂಡರ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರು ನಿಗಮ ಕಾಲಕಾಲಕ್ಕೆ ವಿಧಿಸುವ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತೇವೆ ಎಂದು ದೃಢೀಕರಣ ಪತ್ರ.
7. ಟೆಂಡರ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರು ನಿಗಮ ವಿಧಿಸುವ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವ ಬಗ್ಗೆ ರೂ.200/–ರ ಛಾಪಾ ಕಾಗದದಲ್ಲಿ ಕರಾರು ಮಾಡಿಕೊಡತಕ್ಕದ್ದು.
8. ಈ ಪ್ರಕಟಣೆಗೆ ಸಂಬಂಧಿಸಿದಂತೆ ಇನ್ನಾವುದೇ ಮಾಹಿತಿ ಬೇಕಿದ್ದಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

   1. ಮುಖ್ಯ ವ್ಯವಸ್ಥಾಪಕರು–ಆಡಳಿತ – ಮೊಬೈಲ್ ಸಂ.9141943415
   2. ವ್ಯವಸ್ಥಾಪಕರು–ಉತ್ಪಾದನೆ – ಮೊಬೈಲ್ ಸಂ.9141943430

ವ್ಯವಸ್ಥಾಪಕ ನಿರ್ದೇಶಕರು

**ಪರಿಶಿಷ್ಟ -1**

**<u>ಆರ್ಥಿಕ ಬಿಡ್</u>**

ಟೆಂಡರ್‌ದಾರರ ಹೆಸರು
ಮತ್ತು ವಿಳಾಸ:

ಇ.ಎಂ.ಡಿ. ಮೊತ್ತ ರೂ.____________

ದೂರವಾಣಿ ಮತ್ತು
ಮೊಬೈಲ್ ಸಂ.

**ಟೆಂಡರ್ ಅಧಿಸೂಚನೆ ಸಂ. ಕೆಎಸ್‌ಸಿಡಿಸಿ/ವ್ಯ(ಉ)/ಟಿಎನ್-13/2017-18, ದಿನಾಂಕ:22.05.2017**

| ಕ್ರ.ಸಂ. | ಉತ್ಪಾದನಾ ಘಟಕ | ಮಾಸಿಕ ಬಾಡಿಗೆ ದರ | |
|---|---|---|---|
| | | ಅಂಕಿಯಲ್ಲಿ | ಅಕ್ಷರಗಳಲ್ಲಿ |
| 1 | | | |
| 2 | | | |
| 3 | | | |
| 4 | | | |

ಟೆಂಡರ್‌ದಾರರ ಹೆಸರು, ಸಹಿ
ಮತ್ತು ಮೊಹರು

ದಿನಾಂಕ: